ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

೧. ರಾಯಚೂರು-ವಾನಮಾರಪಳ್ಳಿ ಮತ್ತು ಜಹಿರಾಬಾದ-ನಾಂದೇಡ ರಾಜ್ಯ ಹೆದ್ದಾರಿಯ ಕಾಮಗಾರಿಯು ನಿಧಾನಗತಿಯಿಂದ ಸಾಗುತ್ತಿರುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ.

೨. ಗುತ್ತಿಗೆದಾರರಿಗೆ ಈ ಕಾಮಗಾರಿಗಳ ಪ್ರಗತಿಯನ್ನು ಹೆಚ್ಚಿಸಲು ಈಗಾಗಲೇ ಸೂಚನೆಯನ್ನು ನೀಡಲಾಗಿದೆ.

೩. ಗುತ್ತಿಗೆದಾರರ ಕಾಮಗಾರಿಯ ಮುಂದಿನ ಪ್ರಗತಿಯನ್ನು ಗಮನಿಸಿ ಗುತ್ತಿಗೆ ಕರಾರಿನ ಅನ್ವಯ ಕ್ರಮವನ್ನು ಜರುಗಿಸಲಾಗುವುದು.

ಔರಾದ್ ತಾಲ್ಲೂಕು ಅರಣ್ಯ ಕಛೇರಿ ಕುರಿತು.

೨೮೮೮(೩೭೪೯)

ಶ್ರೀ ಗುಂಡಪ್ಪ ವಕೀಲ್(ಔರಾದ್): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ ಸಾತಪೂರ ಗ್ರಾಮದಲ್ಲಿ ಅರಣ್ಯ ವಲಯ ಕಛೇರಿ ಸದಾ ಮುಚ್ಚಿರುವುದು ಹಾಗೂ ಅಧಿಕಾರಿಗಳು ಬೀದರ್‌ನಲ್ಲಿ ಮನೆಮಾಡಿ ಕಛೇರಿಗೆ ಬಾರದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಬಗ್ಗೆ ತೆಗೆದಕೊಂಡ ಕ್ರಮಗಳೇನು?

ಇ) ಹತ್ತಾರು ವರ್ಷಗಳಿಂದ ಒಂದೇ ಸ್ಥಳದಲ್ಲಿರುವ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗುವುದೇ?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಕೆಲವು ಸಂದರ್ಭಗಳಲ್ಲಿ ಸಾಮಾಜಿಕ ಅರಣ್ಯ ವಲಯ ಕಛೇರಿಯು ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹಾಲಿ ಇರುವ ವಲಯ ಅರಣ್ಯಾಧಿಕಾರಿಯ ಕಾರ್ಯಭಾರವನ್ನು ಅಲ್ಲಿರುವ ವನಪಾಲಕರಿಗೆ ಒಪ್ಪಿಸಿ, ಕಛೇರಿಯನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಂಡು

ಬರಲಾಗುತ್ತಿದೆ.

ಇ) ಸರ್ಕಾರದ ವರ್ಗಾವಣೆ ಮಾರ್ಗಸೂಚಿ ಅನ್ವಯ ವಿವಿಧ ವರ್ಗಗಳ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗುತ್ತದೆ.

ಮೈಸೂರು ನಗರ ಮತ್ತು ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ವ್ಯಾಪ್ತಿಯಲ್ಲಿರುವ ಅತಿಥಿಗೃಹಗಳ ಖಾಸಗೀಕರಣ.

೨೮೯೦(೩೩೨೩)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಮತ್ತು ಮೈಸೂರು ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಸೇರಿದ ಎಷ್ಟು ಅತಿಥಿ ಗೃಹಗಳು ಇವೆ? ಅವು ಯಾವುವು?

ಆ) ಸರ್ಕಾರಿ ಅತಿಥಿ ಗೃಹಗಳನ್ನು ಲಾಭಗಳಿಸುವಂತೆ ಮಾಡಲು ಖಾಸಗೀಕರಣಗೊಳಿಸಲು ಆಲೋಚನೆ ಸರ್ಕಾರಕ್ಕೆ ಇದೆಯೇ?

ಇ) ಹಾಗಿದ್ದಲ್ಲಿ ಈ ಕುರಿತಾಗಿ ರೂಪಿಸಿರುವ ಯೋಜನೆಗಳೇನು?

ಈ) ಈ ವಸತಿಗೃಹಗಳನ್ನು ಸರ್ಕಾರದ ನಿಬಂಧನೆಗಳ ಪ್ರಕಾರ ವಹಿಸಿಕೊಂಡು ಕಾರ್ಯನಿರ್ವಹಿಸಲು ಮುಂದೆ ಬಂದಿರುವ ಖಾಸಗಿ ಸಂಸ್ಥೆಗಳು ಯಾವುವು? (ವಿವರ ಕೊಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಮೈಸೂರು ನಗರದಲ್ಲಿ ಎರಡು ಅತಿಥಿ ಗೃಹಗಳು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಇರುತ್ತವೆ. ಅವುಗಳು: ೧) ಜಲದರ್ಶಿನಿ ಅತಿಥಿಗೃಹ ೨) ಚಾಮುಂಡಿ ಅತಿಥಿಗೃಹ.

ಮೈಸೂರು ತಾಲ್ಲೂಕಿನಲ್ಲಿ ಬೇರೆ ಯಾವುದೇ ಅತಿಥಿಗೃಹಗಳು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಇರುವುದಿಲ್ಲ.

ಆ) ಖಾಸಗೀಕರಣಗೊಳಿಸುವ ಆಲೋಚನೆ ಸದ್ಯಕ್ಕೆ ಇರುವುದಿಲ್ಲ.